OCTOBER 18, 2025

# AKASHAVANI - DHARWAD
# PRADESH SAMACHARA (KANNADA) 12.00 P.M.

<><><>

**'ಧನ ತ್ರಯೋದಶಿ, ಧನ–ಕನಕಗಳ ಜೊತೆ,** ಸುಖ–ಶಾಂತಿ–ನೆಮ್ಮದಿ ತರಲಿ, ಸೌಹಾರ್ದತೆಯ ಬೆಳಕು ಎಲ್ಲೆಡೆ ಪಸರಿಸಲಿ', ಎಂದು, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಶುಭಾಶಯ ಕೋರಿದ್ದಾರೆ. ದೀಪಾವಳಿ ಹಬ್ಬದ ಹಿನ್ನೆಲೆ, ಇಂದು ನಾಡಿನಾದ್ಯಂತ, ಧನ್ ತೇರಸ್ ಆಚರಿಸಲಾಗುತ್ತಿದೆ.

<><><>

**ಕೃಷಿ ಉತ್ಪನ್ನಗಳ ಸಂಸ್ಕರಣೆ,** ರೈತ ಉತ್ಪಾದಕರ ಸಂಸ್ಥೆಗಳಿಗೆ, ವಿವಿಧ ಸಾಲ ಯೋಜನೆಗಳ ಮೂಲಕ ಪ್ರೋತ್ಸಾಹಿಸುವಂತೆ, ಕೇಂದ್ರ ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ್, ಬ್ಯಾಂಕರ್‌ಗಳಿಗೆ ಸೂಚಿಸಿದ್ದಾರೆ. ಬಳ್ಳಾರಿಯ, ಕರ್ನಾಟಕ ಗ್ರಾಮೀಣ ಬ್ಯಾಂಕಿನ, ಪ್ರಧಾನ ಕಚೇರಿಯಲ್ಲಿ, ಪ್ರಗತಿ ಪರಿಶೀಲಿಸಿ, ಅವರು ಮಾತನಾಡಿದರು.  ಕರ್ನಾಟಕ ಗ್ರಾಮೀಣ ಬ್ಯಾಂಕ್, ಕೇಂದ್ರ ಪುರಸ್ಕೃತ, ಸಾಮಾಜಿಕ ಮತ್ತು ಆರ್ಥಿಕ ಸುರಕ್ಷಾ ಯೋಜನೆಗಳ ಅನುಷ್ಠಾನದಲ್ಲಿ, ಉತ್ತಮ ಸಹಭಾಗಿತ್ವ ತೋರಿದೆ ಎಂದು, ಸಚಿವರು ಶ್ಲಾಘಿಸಿದರು.

<><><>

**ಈ ತಿಂಗಳ 23 ರಿಂದ, ಮೂರು ದಿನಗಳ ಕಾಲ,** ಬೆಳಗಾವಿ ಜಿಲ್ಲೆಯ, ಐತಿಹಾಸಿಕ ಕಿತ್ತೂರಿನಲ್ಲಿ ಆಯೋಜಿತ, ಕಿತ್ತೂರು ಉತ್ಸವದ ಹಿನ್ನೆಲೆ, ಕಿತ್ತೂರು ಚನ್ನಮ್ಮ ಜ್ಯೋತಿ ರಥಯಾತ್ರೆ ರಾಜ್ಯಾದ್ಯಂತ ಸಂಚರಿಸುತ್ತಿದೆ. ಕಿತ್ತೂರು ಚನ್ನಮ್ಮ ಜ್ಯೋತಿರಥ ಯಾತ್ರೆ, ನಾಳೆ ಬೆಳಗ್ಗೆ 11.30ಕ್ಕೆ, ಸವದತ್ತಿ ತಾಲೂಕು ಹಾರೋ ಬೆಳವಡಿ ಮಾರ್ಗವಾಗಿ, ಧಾರವಾಡಕ್ಕೆ ಆಗಮಿಸಲಿದೆ. ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ, ಅನೇಕ ಕಲಾ ತಂಡಗಳು ಪಾಲ್ಗೊಂಡು, ಜನೋತ್ಸವದ ಜ್ಯೋತಿ ರಥಯಾತ್ರೆಯನ್ನು ಅಭಿಮಾನದಿಂದ ಸ್ವಾಗತಿಸಲಿವೆ ಎಂದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತಿಳಿಸಿದೆ.

<><><>

**ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ,** 'ಫಿಟ್ ಇಂಡಿಯಾ' ಅಡಿಯಲ್ಲಿ, ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ, 150ನೇ ಜನ್ಮ ದಿನಾಚರಣೆಯ ನೆನಪಿನಲ್ಲಿ, ಈ ತಿಂಗಳ 31 ರಿಂದ "ಐರನ್ ವೀಲ್ಸ್ ಆಫ್ ಯೂನಿಟಿ" ಎಂಬ ಶೀರ್ಷಿಕೆಯಡಿ, ರಾಷ್ಟ್ರವ್ಯಾಪಿ ಎರಡು ಸೈಕ್ಲಿಂಗ್ ಯಾತ್ರೆಗಳನ್ನು ಆಯೋಜಿಸಲಿದೆ. ಈ ಯಾತ್ರೆಗಳು ದೇಶದ ಉದ್ದಗಲಕ್ಕೂ ಸಂಚರಿಸಿ, ರಾಷ್ಟ್ರೀಯ ಐಕ್ಯತೆ, ಸಾರಲಿವೆ. ಕಾಶ್ಮೀರದಿಂದ ಕನ್ಯಾಕುಮಾರಿ ಕೆ2ಕೆ ಸೈಕ್ಲಿಂಗ್ ಯಾತ್ರೆ, ನವೆಂಬರ್ 16 ರಂದು ತಮಿಳುನಾಡಿನ ಕನ್ಯಾಕುಮಾರಿಯಲ್ಲಿ ಸಮಾರೋಪಗೊಳ್ಳಲಿದೆ. ಒಟ್ಟು 150 ಸೈಕಲ್ ಸವಾರರು ಭಾಗವಹಿಸಲಿದ್ದಾರೆ.

<><><>

**ಕರ್ನಾಟಕ ಏಕೀಕರಣಕ್ಕೆ** ಕೊಡುಗೆ ನೀಡಿದ, ಧಾರವಾಡದ ಆಲೂರು ವೆಂಕಟರಾಯರು ಸೇರಿದಂತೆ, ಹಲವು ಮಹನೀಯರ ಕೊಡುಗೆಗಳನ್ನು ಸ್ಮರಿಸಲು, ನಗರದ ಆರ್.ಎನ್. ಶೆಟ್ಟಿ ಕ್ರೀಡಾಂಗಣದಲ್ಲಿ, ಕನ್ನಡ ರಾಜ್ಯೋತ್ಸವವನ್ನು, ನವೆಂಬರ್ 1 ರಂದು, ಅರ್ಥಪೂರ್ಣವಾಗಿ ಆಯೋಜಿಸಲಾಗುವುದು ಎಂದು, ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ.

<><><>

**ಉತ್ತರಕನ್ನಡ ಹಾಗೂ ಗದಗ** ಜಿಲ್ಲೆಗಳಲ್ಲೂ, ರಾಜ್ಯೋತ್ಸವದ ಸಿದ್ಧತೆಗಳು, ಭರದಿಂದ ಸಾಗಿವೆ.

<><><>

**ಬೆಳಗಾವಿ ಜಿಲ್ಲೆ, ಸವದತ್ತಿ ತಾಲೂಕು,** ಸಿರಸಂಗಿಯ, ಪೂಜ್ಯ ತ್ಯಾಗವೀರ ಸಿರಸಂಗಿ ಲಿಂಗರಾಜ ಸರದೇಸಾಯರ ವಾಡೆ ಸಂರಕ್ಷಣೆ, ಸ್ಮಾರಕ ನಿರ್ಮಾಣ, ಥಡಿಮಠದ ಅಭಿವೃದ್ಧಿಗಾಗಿ, ಕೈಗಾರಿಕೆಗಳ ಖಾತೆ ಸಚಿವ ಎಂ.ಬಿ. ಪಾಟೀಲ, 50 ಲಕ್ಷ ರೂಪಾಯಿ ವಯಕ್ತಿಕ ಧನ ಸಹಾಯ ನೀಡುವುದಾಗಿ, ಪ್ರಕಟಿಸಿದ್ದಾರೆ.  ಈ ನಾಡಿನ ಹೆಮ್ಮೆಯ ಇತಿಹಾಸ ಮತ್ತು ಅಮೂಲ್ಯ ಸಂಸ್ಕೃತಿಯ ಮಾದರಿಯಾಗಿ, ಸಿರಸಂಗಿ ವಾಡೆಯನ್ನು, ಪ್ರೇರಣಾ ಕೇಂದ್ರವಾಗಿ ರೂಪಿಸಲಾಗುವುದು, ಎಂದಿದ್ದಾರೆ.

<><><>

**ರಾಜ್ಯದ ಎಲ್ಲ ಜಾತಿ ಹಾಗೂ ಧರ್ಮಗಳ,** ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅರಿಯಲು, ಹಿಂದುಳಿದ ವರ್ಗಗಳ ಆಯೋಗ, ಸಮೀಕ್ಷೆ ಕೈಗೊಂಡಿದೆ. ಈ ಮಾಹಿತಿಯಿಂದ, ರಾಜ್ಯ ಸರ್ಕಾರದ ಬಜೆಟ್ ಮಂಡನೆ, ನೂತನ ಯೋಜನೆಗಳ ಅನುಷ್ಠಾನಕ್ಕೆ, ಅನುಕೂಲವಾಗಲಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟ ಪಡಿಸಿದ್ದಾರೆ.  ಸಮೀಕ್ಷೆಯ ಬಗ್ಗೆ ಅಪಪ್ರಚಾರ ಮಾಡುವವರ ಮಾತಿಗೆ ಬೆಲೆ ಕೊಡದೆ, ಸಮೀಕ್ಷೆಯಲ್ಲಿ ಭಾಗವಹಿಸಿ, ರಾಜ್ಯದ ಅಭಿವೃದ್ಧಿಗಾಗಿ ಕೈ ಜೋಡಿಸುವಂತೆ, ಅವರು ಮನವಿ ಮಾಡಿದ್ದಾರೆ.

<><><>

**ರಾಜ್ಯಾದ್ಯಂತ ನಡೆಯುತ್ತಿರುವ,** ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ, ಮನೆ, ಮನೆಗೆ ಭೇಟಿ ನೀಡಿ, ಮಾಹಿತಿ ಸಂಗ್ರಹಿಸುವ ಕಾರ್ಯ, ನಾಳೆ ಮುಕ್ತಾಯವಾಗಲಿದೆ ಎಂದು,  ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

<><><>

**ಮಹಾತ್ಮ ಗಾಂಧಿ,** ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿ, 'ಜಾಬ್ ಕಾರ್ಡ್' ಪಡೆದ ಕುಟುಂಬಗಳು, ಈ ತಿಂಗಳ 30ರೊಳಗೆ, ಇ–ಕೆವೈಸಿ ಮಾಡಿಸುವುದು ಕಡ್ಡಾಯವಾಗಿದೆ. ಗ್ರಾಮ ಪಂಚಾಯಿತಿ ಸಿಬ್ಬಂದಿ, ಮನೆ–ಮನೆಗೆ ಭೇಟಿ ನೀಡಿದಾಗ, ಅಗತ್ಯ ಮಾಹಿತಿ ನೀಡಿ, ಸಹಕರಿಸುವಂತೆ, ಗದಗ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ಕೋರಿದ್ದಾರೆ.

<><><>

**ಕೇಂದ್ರ ಪುರಸ್ಕೃತ,** ಜಲ್ ಜೀವನ್ ಮಿಶನ್ ಯೋಜನೆಯಡಿ, ಬಾಗಲಕೋಟೆ ಜಿಲ್ಲೆಯಲ್ಲಿ, 608 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ಎಂದು, ಸಂಸದ ಪಿ.ಸಿ ಗದ್ದಿಗೌಡರ ತಿಳಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ದಿಶಾ ಸಭೆಯಲ್ಲಿ ಪಾಲ್ಗೊಂಡು, ಅವರು ಮಾತನಾಡಿದರು. ಪ್ರಧಾನಮಂತ್ರಿ ಆವಾಸ್ ಯೋಜನೆ ಮೊತ್ತವನ್ನು ಹೆಚ್ಚಿಸುವಂತೆ ಕೇಂದ್ರಕ್ಕೆ ತಾವು ಮನವಿ ಮಾಡುವುದಾಗಿ ಹಾಗೂ ಬಾಗಲಕೋಟೆ–ಕುಡಚಿ ರೈಲು ಮಾರ್ಗ ಕಾಮಗಾರಿಗೆ, ಅನುದಾನದ ಕೊರತೆಯಿಲ್ಲ ಎಂದು, ಸ್ಪಷ್ಟ ಪಡಿಸಿದರು.

<><><>

**ನಿವೃತ್ತ ಹಿರಿಯ ಗ್ರಂಥಾಲಯ ಅಧಿಕಾರಿ,** ಜಿ. ಬಿ. ಹೊಂಬಳ ಅವರ, ೮೧ನೇ ಜನ್ಮ ದಿನದ ಹಿನ್ನೆಲೆ, ಬೆಂಗಳೂರಿನ ವಸು ವತ್ಸಲೆ ಅವರ, ಮಕ್ಕಳ ಕಾದಂಬರಿ, 'ಮಹಿ', ೨೦೨೫ನೇ ಸಾಲಿನ, ರಾಜ್ಯ ಪ್ರಶಸ್ತಿಗೆ ಆಯ್ಕೆಯಾಗಿದೆ.

ಪ್ರಶಸ್ತಿ ೧೫ ಸಾವಿರ ರೂಪಾಯಿ ನಗದು, ಸ್ಮರಣಿಕೆ ಒಳಗೊಂಡಿದ್ದು, ನವೆಂಬರ್ ೧೦ನೇ ತಾರೀಖು, ಧಾರವಾಡ ವಿದ್ಯಾವರ್ಧಕ ಸಂಘದ, ರಾ.ಹ. ದೇಶಪಾಂಡೆ ಸಭಾಗೃಹದಲ್ಲಿ, ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು, ಸಮಿತಿ ಕಾರ್ಯದರ್ಶಿ ಆನಂದ ಪಾಟೀಲ ತಿಳಿಸಿದ್ದಾರೆ.

<><><>

**ಬರುವ ನವೆಂಬರ್ 1 ರಿಂದ, 30ರ ವರೆಗೆ,** ಕೇಂದ್ರ ಪಿಂಚಣಿ ಮತ್ತು ಪಿಂಚಣಿದಾರರ ಯೋಗಕ್ಷೇಮ ಸಚಿವಾಲಯ, ಜೀವಿತ ಪ್ರಮಾಣ ಪತ್ರ, ಡಿಜಿಟಲ್ ಲೈಫ್ ಸರ್ಟಿಫಿಕೆಟ್, ಸಲ್ಲಿಕೆ ಆಂದೋಲನ ದೇಶಾದ್ಯಂತ ಆಯೋಜಿಸಲಿದೆ.

<><><>

**ರಾಜ್ಯದ ಕರಾವಳಿ, ಮಲೆನಾಡು ಹಾಗೂ** ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿ, ಗುಡುಗು ಸಹಿತ ಜೋರಾದ ಗಾಳಿಯೊಂದಿಗೆ, ಚದುರಿದಂತೆ, ವ್ಯಾಪಕವಾಗಿ, ಹಗುರದಿಂದ ಸಾಧಾರಣ ಮಳೆ ಹಾಗೂ ಅಲ್ಲಲ್ಲಿ ಭಾರಿ ಮಳೆ ನಿರೀಕ್ಷೆ ಇದೆ. ಉತ್ತರ ಒಳನಾಡು ಜಿಲ್ಲೆಗಳಲ್ಲಿ, ಅಲ್ಲಲ್ಲಿ ಚದುರಿದಂತೆ, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ತಿಳಿಸಿದೆ.

**<><><>**